

ಎಡದಿಂದ ಬಲಕ್ಕೆ:

1. ಆತನ ಅಂಧತ್ವ ನಿವಾರಣೆಯಾದದ್ದೇ ಒಂದು ವಿಸ್ಮಯ (3)
3. ಮುಂದಿನದನ್ನು ಊಹಿಸಿ ಈಗಲೇ ತುಳಿದು ಹಾಕುವುದೇ? (3)
4. ಇದನ್ನೆಲ್ಲ ಮುರಿಸಲು ಶುಲ್ಕ ಏನು? (3)
6. ಆತ ಓರಣಗೊಳಿಸಿದ್ದು ಇದೇ ಪ್ರದೇಶ (4)
7. ಸಂಗೀತ ಧ್ವನಿಯೊಡನೆ ಮೈಭಾಗಗಳಿಗೆಲ್ಲ ಸುಗಂಧ ಲೇಪನ (4)
9. ಹಾದಿಯನ್ನು ತಪ್ಪಿಸಿದವ ಹಸು-ಕರು ಕಾಯುವವ (4)
11. ಎಣ್ಣೆಯಲ್ಲಿ ಹುರಿದದ್ದು 'ಕಪ್ಪು ಕಹಿ ಎಲೆ' (4)
15. ಲಡ್ಡುವಿಗಾಗಿ ನಡೆಯಿತು ಭಾರೀ ಯುದ್ಧ (3)
16. ಗಾಜಿನಲ್ಲಿ ಎಲ್ಲೆಲ್ಲೂ ಇದೇನು ಕೊಳಕು? (3)
17. ತೇರನ್ನೆಳೆಯಲು ಮುಂದಾದಳು ಬಾಲೆ (3)

ಮೇಲಿಂದ ಕೆಳಕ್ಕೆ:

1. ಅದನ್ನೆಲ್ಲ ಭಸ್ಮ ಮಾಡೀತು ಬೆಂಕಿ (3)
2. ತಣ್ಣೀರು ಹೊರುವುದಕ್ಕೆ ಈ ಯುವಕನೇ ಸರಿ (3)
3. ಸುಂದರವೋ ಸುಂದರ, ದಶದಿನಗಳ ಹಬ್ಬ (3)
5. ಮಾರು ಹೋಗದಿರುವನೇ ಈ ಭಕ್ತಿಗೆ ಕೃಷ್ಣ? (3)
6. ಅಂದವಾದ ಏನನ್ನೇ ಕಂಡರೂ ಸಂತಸ ತಾನೇ? (3)
8. ಗೌಡರೇ ಘೋಷಿಸಿದ್ದು ಈ ವಾಯಿದೆ (3)
10. ಗವಿಯಲ್ಲಿ ಅಡಗಿದ್ದಾನೆ ನೋಡಿ ಹಳ್ಳಿಯವ (3)
12. ಅಂಜುವವರಿಗೆ ಧೈರ್ಯ ತುಂಬುವ ಸಂಪ್ರದಾಯ ಇದೆ (3)
13. ತಾಯಿಯೇ ತೊಡಿಸಿದ್ದು ಈ ಸುರಕ್ಷಾ ದಾರ (3)
14. ರಾಗ ಎಳೆದೆಳೆದು ಇದೇನು ಕಿರಿಕಿರಿ? (3)

### ಪದಬಂಧ 8-11-2012 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಪ್ರಜಾಪತಿ; 3. ವಸತಿ; 7. ಹಟಮಾರಿ; 8. ಸಾಹಸ; 9. ಕೆರ; 12. ನಸು; 14. ಶೋಧಕ; 15. ಮಸಲತ್ತು; 17. ಮಾರಕ; 18. ಪ್ರಾಣಭಯ.

ಮೇಲಿಂದ ಕೆಳಕ್ಕೆ:

1. ಪ್ರತಿ; 2. ಪಲ್ಲಟ; 4. ಸರಸತಿ (=ಸರಸ್ವತಿ); 5. ಅರಿಕೆ; 6. ಮಾಸಾಶನ; 10. ರತ್ನಾಕರ; 11. ಆಶೋತ್ತರ; 13. ಸುಮತಿ; 16. ಲಕ್ಷ್ಮಣ; 17. ಮಾಯ.

# ಪ್ರಶ್ನಾಂಕಣ

## ಹಕ್ಕಿ ಮೊಟ್ಟೆ - ಏನು ದಾಖಲೆ?

ಎಲ್ಲ ಹಕ್ಕಿಗಳೂ ಮೊಟ್ಟೆ ಇಟ್ಟು ಮರಿ ಮಾಡುತ್ತವೆ. ಸ್ತನಿಗಳಂತೆ ಬಿಸಿ ರಕ್ತದ ಜೀವಿಗಳಾಗಿದ್ದರೂ ಸರೀಸೃಪಗಳಿಂದ ವಿಕಾಸಗೊಂಡಿರುವ ಹಕ್ಕಿಗಳು ಸರೀಸೃಪಗಳ ಮೊಟ್ಟೆ ಇಡುವ ಸಂತಾನ ಕ್ರಮವನ್ನೇ ಉಳಿಸಿಕೊಂಡಿವೆ. ಪ್ರಸ್ತುತ ಸುಮಾರು ಹತ್ತು ಸಾವಿರ ಖಗ ಪ್ರಭೇದಗಳಿವೆ. ಅವುಗಳ ಶರೀರ ಗಾತ್ರ ಭಿನ್ನ ಭಿನ್ನವಾಗಿರುವಂತೆಯೇ ಅವುಗಳ ಮೊಟ್ಟೆ ಗಾತ್ರಗಳೂ ಬೇರೆ ಬೇರೆ. ಹಕ್ಕಿ ಮೊಟ್ಟೆಗಳ ಅತ್ಯಂತ ದೈತ್ಯ ಮತ್ತು ಅತ್ಯಂತ ಕುಬ್ಜ ಗಾತ್ರಗಳ ಅಚ್ಚರಿಯ ದಾಖಲೆಗಳನ್ನು ಗಮನಿಸಿ:

ಈಗಿನ ಖಗ ಜಗದ ಪರಮ ದೈತ್ಯ ಹಕ್ಕಿಯಾದ 'ಆಸ್ಟ್ರಿಚ್'ನ ಮೊಟ್ಟೆಯದೇ ಗರಿಷ್ಠ ಗಾತ್ರದ ವಿಶ್ವದಾಖಲೆ. ಉತ್ತರ ಆಫ್ರಿಕಾದಲ್ಲಿ ನೆಲೆಸಿರುವ ಆಸ್ಟ್ರಿಚ್ ಪ್ರಭೇದ 'ಸ್ಟ್ರುತಿಯೋ ಕ್ಯಾಮಲಸ್'ನದು ಆರು ಅಡಿ ಎತ್ತರ; 150 ಕಿಲೋ ದೇಹ ತೂಕ. ಈ ಪ್ರಭೇದದ ಹೆಣ್ಣು ಹಕ್ಕಿಗಳು ಇಡುವ ಮೊಟ್ಟೆಗಳದು ಅರ್ಧ ಅಡಿ (15 ಸೆಂ.ಮೀ.) ವ್ಯಾಸ! ಸಮೀಪ ಎರಡು ಕಿಲೋ ತೂಕ! ಶುದ್ಧ ಬಿಳುಪಿನ ಈ ಮೊಟ್ಟೆಗಳ ಚಿಪ್ಪಿನ ದಪ್ಪ 1.5 ಮಿಲಿ ಮೀಟರ್! ಮನುಷ್ಯರೇ ಏರಿ ನಿಂತರೂ, ಒಂದು ನೂರು ಕಿಲೋ ತೂಕ ಹೇರಿದರೂ ಈ ಮೊಟ್ಟೆ ಮುರಿಯುವುದಿಲ್ಲ. ಆಸ್ಟ್ರಿಚ್‌ನ ಪ್ರತಿ ಮೊಟ್ಟೆಯ ಗಾತ್ರ ಇಪ್ಪತ್ನಾಲ್ಕು ಕೋಳಿ ಮೊಟ್ಟೆಗಳ ಒಟ್ಟು ಗಾತ್ರಕ್ಕೆ ಸಮ! ಆದ್ದರಿಂದಲೇ ಆಫ್ರಿಕಾದ ಕೆಲವಾರು ಸ್ಥಳೀಯರು ಈ ಮೊಟ್ಟೆ ಚಿಪ್ಪನ್ನು ನೀರು ಸಂಗ್ರಹಿಸುವ ಪಾತ್ರೆಯಂತೆ ಬಳಸುತ್ತಾರೆ.



ಅದಕ್ಕೆ ಸಂಪೂರ್ಣ ವಿರುದ್ಧವಾಗಿ ಖಗ ಜಗದ ಅತಿ ಪುಟ್ಟ ಹಕ್ಕಿಯೊಂದು ನೇರ ನೋಡಿದರೂ ನಂಬಲಾಗದಷ್ಟು ಚಿಕ್ಕ ಗಾತ್ರದ ಮೊಟ್ಟೆ ಇಡುತ್ತದೆ. ಜಮೈಕಾದ ವೃಷ್ಟಿವನದಲ್ಲಿರುವ ಹೆಬ್ಬೆಟ್ಟಿನ ಗಾತ್ರದ ಝೇಂಕಾರದ ಹಕ್ಕಿ ಪ್ರಭೇದ 'ಮೆಲ್ಲಿಸುಗಾ ಮಿನಿಮಾ'ದ ಮೊಟ್ಟೆ 10 ಮಿಲಿ ಮೀಟರ್ ವ್ಯಾಸ ಮೀರುವುದಿಲ್ಲ. ದಪ್ಪ ಬಟಾಣಿ ಕಾಳುಗಳ ಗಾತ್ರದ ಈ ಮೊಟ್ಟೆಯ ತೂಕ 0.37 ಗ್ರಾಂ! ಎಂದರೆ ಒಂದು ಕಿಲೋ ತೂಗಲು 2700 ಮೊಟ್ಟೆಗಳು! ಈ ತೂಕವನ್ನೂ ಗಾತ್ರವನ್ನೂ ಆಸ್ಟ್ರಿಚ್ ಮೊಟ್ಟೆಗೆ ನೀವೇ ಹೋಲಿಸಿ ನೋಡಿ.

ಖಗ ಜಗದ ಅತ್ಯಂತ ದೊಡ್ಡ ಮೊಟ್ಟೆಯ ಸರ್ವಕಾಲಿಕ ದಾಖಲೆ 'ಆನೆ ಹಕ್ಕಿ'ಯದು. ಪ್ರಾಚೀನ ಕಾಲದಲ್ಲಿ 'ಮಡಗಾಸ್ಕರ್'ನಲ್ಲಿದ್ದು ಸಂಪೂರ್ಣ ಅಳಿದು ಹೋಗಿರುವ, ಹತ್ತಡಿಗೂ ಅಧಿಕ ಎತ್ತರವಿದ್ದ ಆ ಹಕ್ಕಿಯ ಪ್ರತಿ ಮೊಟ್ಟೆಯದೂ ಒಂದು ಅಡಿ ವ್ಯಾಸ, ಬಿಂದಿಗೆಯ ಗಾತ್ರ, ಒಂಬತ್ತು ಕಿಲೋ ತೂಕ! ಎಂಥ ಅದ್ಭುತ ದಾಖಲೆ!

■ ಎನ್. ವಾಸುದೇವ್